O.S.No.90/13
DW1

ದಿನಾಂಕ 15-07-2019 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್ ವಕೀಲರಿಂದಃ</u>

ದಾವಾ ಸೊತ್ತುಗಳು ಚೇಂಕ್ರ ಮಡಿವಾಳರ ಸ್ವಯಾರ್ಜಿತ ಸ್ವತ್ತುಗಳೆಂದರೆ ಚೇಂಕ್ರ ಮಡಿವಾಳ ಮತ್ತು ಅವರ ಹೆಂಡತಿ ಮತ್ತು ಮಕ್ಕಳ ಸೊತ್ತುಗಳು. ಚೇಂಕ್ರ ಮಡಿವಾಳರವರನ್ನು ದೂಮಣ್ಣ ಮಡಿವಾಳರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆದರೆ ಅವರನ್ನು ರಾಮಣ್ಣ ಮಡಿವಾಳರವರು ನೋಡಿಕೊಳ್ಳುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ರಾಮಣ್ಣ ಮಡಿವಾಳರವರು ಈಗ ಜೀವಂತ ಇದ್ದಾರೆ. ಚೇಂಕ್ರ ಮಡಿವಾಳರವರು ರಾಮಣ್ಣ ಮಡಿವಾಳ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೇಂಕ್ರ ಮಡಿವಾಳರವರು ದಿಃ 21.4.1994 ರಲ್ಲಿ ದಾವಾ ಸೊತ್ತುಗಳಿಗೆ ಸಂಬಂಧಿಸಿದಂತೆ ದೂಮಣ್ಣ ಮಡಿವಾಳರವರ ಹೆಸರಿಗೆ ಒಂದು ನೋಂದಾಯಿತ ವಿಲ್ ನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಯನ್ನು ಅವರು ಸ್ವಇಚ್ಚೆಯಿಂದ ಬರೆದಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ವಿಲ್ ನಾಮೆ ಆಧಾರದ ಮೇಲೆ ದೂಮಣ್ಣ ಮಡಿವಾಳರವರು ದಾವಾ ಸೊತ್ತುಗಳನ್ನು ಸ್ವಾದೀನಕ್ಕೆ ಪಡೆದುಕೊಂಡು ಅವರೇ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ